

ಒಬ್ಬ ಆಟೊ ಚಾಲಕನ ಮದುವೆ ನಡೆಯುತ್ತಿತ್ತು. ವಧುವನ್ನು ಹಸೆಮಣೆಗೆ ಕರೆದುಕೊಂಡು ಬಂದಾಗ ಅವಳು ನಾಚಿಕೆಯಿಂದ ವರನಿಂದ ಸ್ವಲ್ಪ ಅಂತರದಲ್ಲಿ ಕುಳಿತುಕೊಂಡಳು. ಆಗ ಅವನೆಂದ ಸ್ವಲ್ಪ ಒತ್ತಿ ಕುಳಿತುಕೊಳ್ಳಬಾರದೆ ನಿನ್ನ ಪಕ್ಕದಲ್ಲಿ ಇನ್ನೊಬ್ಬಳು ಕುಳಿತುಕೊಳ್ಳಬಹುದು!

ಆಫೀಸಿಗೆ ಹೋಗಿದ್ದ ಗಂಡನಿಗೆ ಹೆಂಡತಿ ಕರೆ ಮಾಡಿ, 'ರೀ, ನೀವು ಆಫೀಸ್‌ನಿಂದ ಬರುವಾಗ ಎರಡು ಹಾಲಿನ ಪಾಕೆಟ್ ತೆಗೆದುಕೊಂಡು ಬನ್ನಿ. ಒಂದು ವೇಳೆ ಮೊಟ್ಟೆಗಳೇನಾದರೂ ಕಣ್ಣಿಗೆ ಬಿದ್ದರೆ ಅರ್ಧ ಡಜನ್ ತೆಗೆದುಕೊಂಡು ಬನ್ನಿ' ಎಂದಳು. ಮನೆಗೆ ಬಂದ ಪತಿ, ಕೈಯಲ್ಲಿ ಆರು ಹಾಲಿನ ಪಾಕೆಟ್‌ಗಳನ್ನು ಹಿಡಿದುಕೊಂಡು ಬಂದು ತಗೊಳೇ' ಎಂದ. ಹೆಂಡತಿ, 'ರೀ ಇಷ್ಟೊಂದ್ ಹಾಲಿನ ಪಾಕೆಟ್‌ಗಳನ್ನು ಯಾಕೆ ತಂದ್ರಿ?. ಅದಕ್ಕೆ ಉತ್ತರಿಸಿದ ಪತಿ, 'ಲೇ ನೀನೇ ಅಲ್ವಾ ಹೇಳಿದ್ದು, ಮೊಟ್ಟೆಗಳೇನಾದರೂ ಕಣ್ಣಿಗೆ ಬಿದ್ದರೆ ಅರ್ಧ ಡಜನ್ ತೆಗೆದುಕೊಂಡು ಬನ್ನಿ ಅಂತ. ಮೊಟ್ಟೆಗಳು ಕಣ್ಣಿಗೆ ಬಿದ್ದವು. ಅದ್ಕೆ ಅರ್ಧ ಡಜನ್ ಹಾಲಿನ ಪಾಕೆಟ್‌ಗಳನ್ನು ತೆಗೆದುಕೊಂಡು ಬಂದೆ!

ಡಾಕ್ಟರ್: ನಿನ್ನ ಒಂದು ಕಿಡ್ನಿ ಫೇಲಾಗಿದೆ ಕಣಪ್ಪ. ಆದಷ್ಟು ಬೇಗ ಆಪರೇಷನ್ ಮಾಡಬೇಕು.
ಗಾಂಪಾ: (ಬಿಕ್ಕಿ ಬಿಕ್ಕಿ ಅತ್ತು) ಎಷ್ಟು ಮಾರ್ಕ್ಸ್‌ಗಳಿಂದ ಫೇಲಾಗಿದೆ ಮತ್ತು ಸಂಪ್ಲಿಮೆಂಟರಿ ಎಕ್ಸಾಂ ಯಾವಾಗ ಬರೀಬೇಕು ಸರ್?

★★★

ಪತ್ನಿ: ಒಂದು ವೇಳೆ ನನ್ನ ಮದುವೆ ಒಬ್ಬ ರಾಕ್ಷಸನೊಂದಿಗೆ ಆಗಿದ್ದರೂ ಈಗಿರುವುದಕ್ಕಿಂತ ಹೆಚ್ಚು ಸುಖಿಯಾಗಿರುತ್ತಿದ್ದೆ.
ಪತಿ: ಲೇ ಹುಚ್ಚಿ, ಎಲ್ಲಾದರೂ ಅಣ್ಣ–ತಮ್ಮನೊಂದಿಗೆ ತಂಗಿ ಮದುವೆ ಆಗುವುದನ್ನು ನೋಡಿದ್ದೀಯೇನೆ?

★★★

ಗೆಳೆಯ: ತಾಯಿಯ ಚರಣಗಳಲ್ಲಿ ಸ್ವರ್ಗ ಇರುತ್ತದೆ ಅಂತೆ ಗುಂಡ.
ಗುಂಡ: ಹಾಗಾದರೆ ಅಜ್ಜಿಯ ಚರಣಗಳಲ್ಲಿ ಏನಿರುತ್ತದೆ?
ಗೆಳೆಯ: ತುಂಬ ಸುಲಭ ಅಜ್ಜಿಯ ಚರಣಗಳಲ್ಲಿ ಸ್ವರ್ಗ–2 ಇರುತ್ತದೆ.

★★★

ಮಾಲೀಕ: ಲೋ ಬಸ್ಯಾ ಸ್ವಲ್ಪ ಗೋಡೆ ಗಡಿಯಾರ ನೋಡಿ ಸಮಯ ಎಷ್ಟಾಗಿದೆ ಅಂತ ಹೇಳೊ.
ಬಸ್ಯಾ: ನನಗೆ ಸಮಯ ನೋಡಲು ಬರೋದಿಲ್ಲ ಯಜಮಾನ್ರೆ.
ಮಾಲೀಕ: ಬರದಿದ್ರೂ ಪರವಾಗಿಲ್ಲ ದೊಡ್ಡ ಮುಳ್ಳು ಹಾಗೂ ಸಣ್ಣ ಮುಳ್ಳು ಎಲ್ಲಿವೆ ಅಂತ ನೋಡಿ ಹೇಳಿ ಸಾಕು.
ನೌಕರ: ಎರಡೂ ಮುಳ್ಳುಗಳು ಗಡಿಯಾರದಲ್ಲೇ ಇವೆ ಯಜಮಾನ್ರೆ.

★★★

ಬಂಟಿ: ಇವತ್ತು ಇಷ್ಟೊಂದು ಚಳಿ ಏಕೆ ಇದೆ?
ಬಬ್ಲಿ: ಸೂರ್ಯ ಮೂಡಿಲ್ಲವಲ್ಲ.
ಬಂಟಿ: ಸೂರ್ಯ ಏಕೆ ಮೂಡಿಲ್ಲ?
ಬಬ್ಲಿ: ಚಳಿಯಲ್ಲಿ ಎದ್ದು ತಿರುಗಾಡಬೇಡ ಶೀತವಾದೀತು ಬೆಚ್ಚನೆ ರಗ್ಗು ಹೊದ್ದು ಮಲಗಿರು ಎಂದು ಅವನ ತಾಯಿ ಹೇಳಿರಬೇಕು ಅದಕ್ಕೆ!

(ಸಂಗ್ರಹ) ಮುರಲೀಧರ ಕುಲಕರ್ಣಿ, ಬೀದರ್

ಓಂ ✝ ☪ ಸರ್ವೇಜನಃ ಸುಖಿನೋ ಭವಂತುಃ ಓಂ ✝ ☪
ಸಮಸ್ಯೆ ನಿಮ್ಮದು ಪರಿಹಾರ ನಮ್ಮದು

ಶ್ರೀ ಸಾಯಿಬಾಬ ಉಪಾಸಕರು
ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ
ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ
ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ
ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
9620444460
ಖಾಯಂ ಮನೆ ವಿಳಾಸ: ಜೈಬಾಲಾಜಿ ಜ್ಯೋತಿಷ್ಯಂ
ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.
ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.